# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 73 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಶಾಲೆಗಳಲ್ಲಿರಬೇಕಾದ ಪ್ರಮಾಣೀಕೃತ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳಾವುವು ಈ ಕುರಿತಂತೆ ಕರ್ನಾಟಕ ರಾಜ್ಯದಲ್ಲಿ ಶಾಲಾವಾರು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಅಂಕಿಅಂಶಗಳು ಲಭ್ಯವಿದೆಯೇ; (ಹಾಗಿದ್ದರೆ ವಿವರ ನೀಡುವುದು) | ಸರ್ಕಾರಿ ಶಾಲೆಗಳಲ್ಲಿರಬೇಕಾದ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳೆಂದರೆ.<br>1. ಶಾಲಾ ಕಟ್ಟಡ<br>2. ಹೆಚ್ಚುವರಿ ತರಗತಿ ಕೊಠಡಿಗಳು<br>3. ಕುಡಿಯುವ ನೀರು<br>4. ಶೌಚಾಲಯಗಳು<br>5. ಪಾಠೋಪಕರಣ<br>6. ಪೀಠೋಪಕರಣ<br>7. ಆಟದ ಮೈದಾನ<br>ಈ ಕುರಿತಂತೆ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಅಂಕಿಅಂಶಗಳ ಜಿಲ್ಲಾವಾರು ಕ್ರೋಢೀಕರಣ ಮಾಹಿತಿಯನ್ನು ಸ್ಯಾಟ್ಸ್ ತಂತ್ರಾಂಶದಲ್ಲಿರುವಂತೆ **ಅನುಬಂಧ-01**ರಲ್ಲಿ ಲಗತ್ತಿಸಿದೆ. |
| ಆ) | ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳ ಮಕ್ಕಳ ಶಿಕ್ಷಣ ಗುಣಮಟ್ಟದ ಬಗ್ಗೆ ಸರ್ಕಾರ ಯಾವುದಾದರೂ ಸಮೀಕ್ಷೆ ನಡೆಸಿದೆಯೇ; ಸಮೀಕ್ಷೆ ಮಾಡಿದ್ದಲ್ಲಿ ಯಾವ ವರ್ಷ ಮಾಡಲಾಗಿತ್ತು; (ವರದಿ ನೀಡುವುದು) | ಕರ್ನಾಟಕ ಪರೀಕ್ಷೆ & ಮೌಲ್ಯ ನಿರ್ಣಯ ಮಂಡಳಿಯಿಂದ ಸರ್ಕಾರಿ ಶಾಲೆಗಳ ಮಕ್ಕಳ ಶಿಕ್ಷಣ ಗುಣಮಟ್ಟದ ಬಗ್ಗೆ ಸಮೀಕ್ಷೆ ನಡೆಸಲಾಗಿರುತ್ತದೆ.<br>2018-19ನೇ ಸಾಲಿನಲ್ಲಿ CSAS ಸಮೀಕ್ಷೆ ನಡೆಸಲಾಗಿದ್ದ 4 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಪೈಕಿ 4, 5, 6ನೇ ತರಗತಿ ವಿದ್ಯಾರ್ಥಿಗಳು 2022-23ನೇ ಸಾಲಿನಲ್ಲಿ ಕ್ರಮವಾಗಿ 8, 9, 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವುದರಿಂದ ಸದರಿ ವಿದ್ಯಾರ್ಥಿಗಳ ಕಲಿಕೆಯಲ್ಲಾಗಿರುವ ಪ್ರಗತಿಯ ಪರಿಶೀಲನೆಗಾಗಿ 8, 9, 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸ್ಯಾಂಪಲ್ ಬೇಸ್ ಆಧಾರದ ಮೇಲೆ SAS ಸಮೀಕ್ಷೆಯನ್ನು ನಡೆಸಲು ಯೋಜಿಸಲಾಗಿತ್ತು. 8, 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳ ಜೊತೆಗೆ ಆಯ್ದ ಸರ್ಕಾರಿ ಶಾಲೆಗಳ 3 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಿಗೂ SAS ಸಮೀಕ್ಷೆಗೆ ಒಳಪಡಿಸಲು ತೀರ್ಮಾನಿಸಿ, ಅದರಂತೆ **ದಿನಾಂಕ: 17.01.2023 ಮತ್ತು 18.01.2023**ರಂದು ರಾಜ್ಯದ ಆಯ್ದ 2618 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 694 ಸರ್ಕಾರಿ ಪ್ರೌಢಶಾಲೆಗಳ ಒಟ್ಟು 2,11,843 ವಿದ್ಯಾರ್ಥಿಗಳನ್ನು ಕಲಿಕಾ ಸಾಧನಾ ಸಮೀಕ್ಷೆ (SAS) ಗೆ ಒಳಪಡಿಸಲಾಗಿರುತ್ತದೆ. (ವಿವರಗಳನ್ನು **ಅನುಬಂಧ-02**ರಲ್ಲಿ ಲಗತ್ತಿಸಿದೆ.) |
| ಇ) | ಸರ್ಕಾರಿ ಶಾಲೆಗಳ ಮೂಲಭೂತ ಕೊರತೆಯ ಕಾರಣಕ್ಕಾಗಿ ಮಕ್ಕಳು | ಸರ್ಕಾರಿ ಶಾಲೆಗಳ ಮೂಲಭೂತ ಕೊರತೆಯ ಕಾರಣಕ್ಕಾಗಿ ಮಕ್ಕಳು ಸರ್ಕಾರಿ ಶಾಲೆಯಿಂದ ದೂರ ಸರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನಲೆಯಲ್ಲಿ ಶಿಕ್ಷಣ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ಮೂಲಭೂತ |

| | | |
|---|---|---|
| | ಸರ್ಕಾರಿ ಶಾಲೆಯಿಂದ ದೂರ ಸರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನಲೆಯಲ್ಲಿ ಶಿಕ್ಷಣ ಇಲಾಖೆ ಕೈಗೊಂಡ ಶಾಲಾ ಸುಧಾರಣಾ ಕ್ರಮಗಳೇನು; (ಅಂಕಿ ಅಂಶ ಸಹಿತ ವಿವರ ನೀಡುವುದು) | ಸೌಕರ್ಯಗಳಿಗಾಗಿ ಮಂಜೂರು ಮಾಡಲಾದ ಅನುದಾನದ ವಿವರಗಳು. |

| ವರ್ಷ | ಕೊಠಡಿ ನಿರ್ಮಾಣ | | ಕೊಠಡಿ ದುರಸ್ಥಿ | |
|---|---|---|---|---|
| | ಕೊಠಡಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ | ಶಾಲೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ |
| **2020-21** | **1476** | **18000.00** | **155** | **1191.11** |
| **2021-22** | **0** | **0** | **481** | **1994.84** |
| **2022-23** | **6535** | **30212.20** | **1833** | **4650** |
| **ಒಟ್ಟು** | **8011** | **48212.20** | **2469** | **7835.95** |

- 2020-21 ಮತ್ತು 2021-22 ಸಾಲಿಗೆ ರಾಜ್ಯ ವಲಯ ಹಾಗೂ ನರೇಗಾ ಅನುದಾನ ಒಗ್ಗೂಡಿಸುವಿಕೆಯ ಮೂಲಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಕ್ರಮವಾಗಿ ರೂ.2920.99, 3500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- 2022-23ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ವಿವಿಧ ಯೋಜನೆಗಳಡಿ ರೂ.23450 ಲಕ್ಷಗಳ ಅನುದಾನವನ್ನು ನಿಗಧಿಮಾಡಲಾಗಿದ್ದು, ರೂ.3500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- 2020-21, 2021-22 ಮತ್ತು 2022-23ನೇ ಸಾಲಿನಲ್ಲಿ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಕುಡಿಯುವ ನೀರು, ಶೌಚಾಲಯಗಳ ನಿರ್ವಹಣೆಗಾಗಿ ಕ್ರಮವಾಗಿ ರೂ.2999.80, 2500.00, 3500.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕ ಯೋಜನೆಗಳಾದ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ವರ್ಕ್ ಬುಕ್ ಮಧ್ಯಾಹ್ನದ ಉಪಹಾರ ಕ್ಷೀರಭಾಗ್ಯ ಉಚಿತವಾಗಿ ನೀಡಲಾಗುತ್ತದೆ.

| | | |
|---|---|---|
| ಈ) | ಕೋವಿಡ್ ನಂತರದ ಅವಧಿಯಲ್ಲಿ ಸರ್ಕಾರಿ ಶಾಲಾ ಮಕ್ಕಳ ಶಿಕ್ಷಣ ಗುಣಮಟ್ಟ ಕಡಿಮೆಯಾಗುತ್ತಿರುವ ಮತ್ತು ಖಾಸಗಿ ಮನೆಪಾಠಕ್ಕೆ ಸರ್ಕಾರಿ ಶಾಲೆಯ ಮಕ್ಕಳು ಹೋಗುತ್ತಿರುವ ಬಗ್ಗೆ ಖಾಸಗಿ (ಎ.ಎಸ್.ಇ.ಆರ್) ಸಮೀಕ್ಷೆಯಲ್ಲಿ ವರದಿಯಾಗಿರುವ | ಕೋವಿಡ್ ಕಾರಣದಿಂದ 2020-21 ಮತ್ತು 2021-22ನೇ ಸಾಲಿನಲ್ಲಿ ಶಾಲೆಗಳು ಪೂರ್ಣ ಪ್ರಮಾಣದಲ್ಲಿ ನಡೆಯದ ಕಾರಣ ಶಾಲಾ ಮಕ್ಕಳ ಶಿಕ್ಷಣದ ಗುಣಮಟ್ಟ ಕಡಿಮೆಯಾಗಿರುವುದು ತಿಳಿದು ಬಂದಿದೆ. ಎರಡು ವರ್ಷಗಳ ಕಲಿಕಾ ಅಂತರವನ್ನು ಸರಿದೂಗಿಸಲು 2022-23ನೇ ವರ್ಷವನ್ನು **"ಕಲಿಕಾ ಚೇತರಿಕೆ ವರ್ಷ"** ಎಂದು ಘೋಷಿಸಿದ್ದು, 1 ರಿಂದ 9ನೇ ತರಗತಿಯವರೆಗಿನ ಸರ್ಕಾರಿ ಶಾಲಾ ಮಕ್ಕಳಿಗೆ ಕಲಿಕಾ ಚೇತರಿಕೆ ಅಭ್ಯಾಸ ಪುಸ್ತಕಗಳ ಮೂಲಕ ಬುನಾದಿ ಭಾಷಾ ಸಾಮರ್ಥ್ಯ ಮತ್ತು ಗಣಿತ ಸಾಮರ್ಥ್ಯಗಳನ್ನು ವಿಶೇಷ ಗಮನಹರಿಸಿ ಕಲಿಸಲಾಗುತ್ತಿದೆ. ಮಾತ್ರವಲ್ಲದೆ, ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿಗೊಳಿಸುವ ಸಂಬಂಧ **ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ** ಎಂಬ ನೀತಿ ಗುರಿಯನ್ನು ಆಧರಿಸಿ ಕೆಳಕಂಡ ಐದು ಗುಣಾತ್ಮಕ ಕಾರ್ಯಕ್ರಮಗಳನ್ನು ಯೋಜಿಸಿದೆ.<br>❖ ಶಿಕ್ಷಣ ಗುಣಮಟ್ಟ ಸುಧಾರಣಾ ಕಾರ್ಯಕ್ರಮ<br>❖ ಗುಣಮಟ್ಟ ಖಾತ್ರಿಯ ಉಪಕ್ರಮಗಳು<br>❖ ತಂತ್ರಜ್ಞಾನ ಆಧಾರಿತ ಕಲಿಕೆ- |

| | | |
|---|---|---|
| | ಹಿನ್ನಲೆಯಲ್ಲಿ ಸರ್ಕಾರ ಶಿಕ್ಷಣ ಸುಧಾರಣೆ ಕುರಿತು ಏನು ಕ್ರಮವಹಿಸಿದೆ; (ವಿವರ ನೀಡುವುದು) | ❖ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು<br>❖ ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಕಾರ್ಯಕ್ರಮಗಳು<br>ಮೇಲಿನ ಐದು ಕಾರ್ಯಕ್ರಮಗಳ ಅಡಿಯಲ್ಲಿ ಕೆಳಕಂಡ ಶೈಕ್ಷಣಿಕ ಗುಣಮಟ್ಟ ಬಲವರ್ಧನ ಕಾರ್ಯಕ್ರಮಗಳನ್ನು ಯೋಜಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br>❖ 1 ರಿಂದ 3ನೇ ತರಗತಿಗಳಲ್ಲಿ ಶಿಶುಕೇಂದ್ರಿತ, ಸಂತೋಷದಾಯಕ ನಲಿ-ಕಲಿ ಪದ್ಧತಿಯನ್ನು ಅಳವಡಿಸಲಾಗಿದೆ. ನಲಿ-ಕಲಿ ಬಲವರ್ಧನೆಗಾಗಿ ಹಲವಾರು ಚಟುವಟಿಕೆಗಳಾದ ಪಠ್ಯಕ್ರಮ ಪರಿಷ್ಕರಣೆ, ಶಿಕ್ಷಕರ ತರಬೇತಿ, ಕಾರ್ಯಕ್ರಮ ಅನುಷ್ಠಾನ ಮೌಲ್ಯಮಾಪನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.<br>❖ 1 ರಿಂದ 3ನೇ ತರಗತಿಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದ 03 ತಿಂಗಳ ಅವಧಿಯ ವಿದ್ಯಾಪ್ರವೇಶ ಎಂಬ ನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.<br>❖ ಗಣಿತ ಕಲಿಕೆ ಬಲವರ್ಧನೆಗಾಗಿ 4 ಮತ್ತು 5ನೇ ತರಗತಿಗಳಿಗೆ ಗಣಿತ ಕಲಿಕಾ ಅಂದೋಲನಾ ಕಾರ್ಯಕ್ರಮ ಅನಷ್ಠಾನಗೊಳಿಸಿದ್ದು, ಶಾಲೆಗಳಿಗೆ ಗಣಿತ ಕಿಟ್‌ಗಳನ್ನು ವಿತರಿಸಿದೆ.<br>❖ ಶಿಕ್ಷಣ ಪ್ರತಿಷ್ಠಾನದ ಸಹ ಭಾಗಿತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಸಮಾನ ವಯಸ್ಕರ ಸಮೂಹದಿಂದ ಕಲಿಕೆ ಹಾಗೂ ವಿವಿಧ ರೀತಿಯ ಪ್ರೇರಿತ ಚಟುವಟಿಕೆ ಕಾರ್ಯಕ್ರಮಗಳ ಮೂಲಕ ಕಲಿಕೆಯನ್ನು ಉತ್ತಮಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.<br>❖ ವಿದ್ಯಾರ್ಥಿಗಳಲ್ಲಿ ಓದು, ಬರಹ ಹಾಗೂ ಗಣಿತದ ಮೂಲಭೂತ ಕೌಶಲಗಳ ಅಭಿವೃದ್ಧಿಗಾಗಿ ತರಗತಿಗಳಲ್ಲಿ ಅಗತ್ಯ ಚಟುವಟಿಕೆಗಳು, ಫ್ಲಾನೆಲ್ ಬೋರ್ಡ್, ವಾಚನಾ ಮೂಲೆಗಳ ಸ್ಥಾಪನೆ, ಅಕ್ಷರಚಪ್ಪರ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.<br>❖ 'ಗುರುಚೇತನ' ಕಾರ್ಯಕ್ರಮದಡಿಯಲ್ಲಿ ಶಿಕ್ಷಕರ ಅಗತ್ಯತೆಗೆ ಅನುಗುಣವಾಗಿ ಮಾಡ್ಯೂಲ್‌ಗಳನ್ನು ಸಿದ್ಧಪಡಿಸಿ, ಶಿಕ್ಷಕರ ಅಗತ್ಯತೆಗೆ ಅನುಗುಣವಾಗಿ ತರಬೇತಿಯನ್ನು ನೀಡಲಾಗುತ್ತಿದೆ.<br>❖ ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಕಾರ್ಯಕ್ರಮ (ಟಿ.ಎ.ಎಲ್.ಪಿ) ದಡಿಯಲ್ಲಿ ಶಿಕ್ಷಕರಿಗೆ ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಬಳಕೆಯ ಬಗ್ಗೆ ತರಬೇತಿ ನೀಡಲಾಗಿದೆ.<br>❖ ಪ್ರಾದೇಶಿಕ ಆಂಗ್ಲ ಭಾಷಾ ತರಬೇತಿ ಸಂಸ್ಥೆ (ಆರ್.ಐ.ಇ) ಬೆಂಗಳೂರು ವತಿಯಿಂದ ಶಿಕ್ಷಕರಿಗೆ ಆಂಗ್ಲ ಭಾಷೆ ಬೋಧನಾ ತರಬೇತಿ ನೀಡಲಾಗಿದೆ.<br>❖ ರಾಜ್ಯದಲ್ಲಿ 74 ಆದರ್ಶ ವಿದ್ಯಾಲಯಗಳ ಸ್ಥಾಪನೆ ಮೂಲಕ ಗ್ರಾಮೀಣ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ.<br>❖ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಭಾಷಾ ಬೋಧನೆಯನ್ನು ಬಲವರ್ಧನೆಗೂಳಿಸಲು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೆ ಬಿಟ್ರಿಷ್ ಕೌನ್ಸಿಲ್ ಸಂಸ್ಥೆಯೊಂದಿಗೆ ಎಂ.ಒ.ಯು. ಮಾಡಿಕೂಳ್ಳಲಾಗಿದೆ.<br>❖ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೂಳ್ಳಲಾಗುತ್ತಿದ್ದು ಇದರಲ್ಲಿ ಆಂಗ್ಲ ಭಾಷಾ ಶಿಕ್ಷಕರು ಇರುತ್ತಾರೆ.<br>❖ ಕಲಿಕಾ ಸಾಧನೆಗಳ ನಿರ್ವಹಣೆಗಾಗಿ ಮಾಹಿತಿ ತಂತ್ರಾಂಶ ಆಧಾರಿತ ವಿದ್ಯಾರ್ಥಿಗಳ ಸಾಧನೆಯನ್ನು ಜಾಡು ಹಿಡಿಯುವ (ಎಸ್.ಎ.ಟಿ.ಎಸ್) ವ್ಯವಸ್ಥೆ ಮೂಲಕ 1 ರಿಂದ 12ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ತಂತ್ರಾಂಶದಲ್ಲಿ |

ಸಂಗ್ರಹಿಸಲಾಗಿದೆ ಹಾಗೂ 86 ಲಕ್ಷ ವಿದ್ಯಾರ್ಥಿಗಳ ಆಧಾರ್ ನೋಂದಣಿ ಪೂರ್ಣಗೊಂಡಿರುತ್ತದೆ.

- ❖ 1 ರಿಂದ 8ನೇ ತರಗತಿ ಅನುಗುಣವಾಗಿ ಕಲಿಕಾ ಫಲಿತಗಳು ಸಿದ್ದಪಡಿಸಿದ್ದು, ವಿದ್ಯಾರ್ಥಿಗಳಿಗೆ, ಪೋಷಕರಿಗೆ ಹಾಗೂ ಶಾಲೆಗಳಿಗೆ ಈ ಮಾಹಿತಿಯನ್ನು ತಲುಪಿಸಲಾಗಿದೆ.
- ❖ ಶಾಲಾ ವಿದ್ಯಾರ್ಥಿಗಳ ಮೌಲ್ಯವರ್ಧನೆಗಾಗಿ ಬಾಂದನಿ ಕಾರ್ಯಕ್ರಮ ಸರಣಿಯ ಮೂಲಕ ನೈತಿಕ ಶಿಕ್ಷಣ (ನೀತಿ ಕಥೆ ಪಾಠ) ನೀಡಲಾಗುತ್ತಿದೆ.
- ❖ ರಾಜ್ಯದಲ್ಲಿ 2401 ದ್ವಿಭಾಷಾ ಮಾಧ್ಯಮ ಶಾಲೆಗಳಿಗೆ ಆಂಗ್ಲ ಕಲಿಕೆಯನ್ನು ಉತ್ತೇಜಿಸಲು ಕಲಿಕಾ ಸಾಮಗ್ರಿಗಳ ಕಿಟ್‌ಗಳನ್ನು ನೀಡಲಾಗಿದೆ.
- ❖ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂ.ಹೆಚ್.ಆರ್.ಡಿ) ಭಾರತ ಸರ್ಕಾರವು, ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು(NSQF) ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನು ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ಅಳವಡಿಸಿ, ಉದ್ಯೋಗ ನಿರ್ವಹಿಸಲು ಅಗತ್ಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ತರಬೇತಿಯನ್ನು 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ರಾಜ್ಯದ 150 ಶಾಲೆಗಳಲ್ಲಿ 21,514 ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.
- ❖ ಸರ್ಕಾರಿ ಶಾಲೆಗಳಲ್ಲಿ ವಿಜ್ಞಾನ ಸಾಮಗ್ರಿಗಳು, ಸ್ಪೋರ್ಟ್ಸ್ ಸಾಮಗ್ರಿ ಹಾಗೂ ತರಗತಿ ಪ್ರಕ್ರಿಯೆ ನಿರ್ವಹಣೆಗಾಗಿ ವಾರ್ಷಿಕ ಶಾಲಾ ಅನುದಾನವನ್ನು ಕೆಳಕಂಡಂತೆ ವಿದ್ಯಾರ್ಥಿ ಸಂಖ್ಯೆಗೆ ಅನುಸಾರವಾಗಿ ನೀಡಲಾಗುತ್ತಿದೆ.

| ವಿದ್ಯಾರ್ಥಿಗಳ ಸಂಖ್ಯೆ | ನಿಗದಿಪಡಿಸಿದ ಮೊತ್ತ |
|---|---|
| 1 ರಿಂದ 15 ಮಕ್ಕಳಿರುವ ಶಾಲೆಗಳು | 12,500/- |
| 16 ರಿಂದ 100 ಮಕ್ಕಳಿರುವ ಶಾಲೆಗಳು | 25,000/- |
| 101 ರಿಂದ 250 ಮಕ್ಕಳಿರುವ ಶಾಲೆಗಳು | 50,000/- |
| 251 ರಿಂದ 1000 ಮಕ್ಕಳಿರುವ ಶಾಲೆಗಳು | 75,000/- |
| 1000 ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳು | 1,00,000/- |

- ❖ 5 ಕಿ.ಮೀ ವ್ಯಾಪ್ತಿಯಲ್ಲಿ ಪ್ರೌಢಶಾಲೆ ಲಭ್ಯತೆ ಇಲ್ಲದ ಪ್ರದೇಶಗಳಲ್ಲಿ 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು 9 ಹಾಗೂ 10 ತರಗತಿಗಳಿಗೆ ಉನ್ನತೀಕರಿಸಲಾಗಿದೆ.
- ❖ ಪ್ರೌಢಶಾಲಾ ಶಿಕ್ಷಕರಿಗೆ ವಿಷಯಾಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ.

ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಿಸಲು ಪ್ರೋತ್ಸಾಹದಾಯಕ ಉಪಕ್ರಮಗಳಾದ ಉಚಿತ ಪಠ್ಯಪುಸ್ತಕ, ಎರಡು ಜೊತೆ ಸಮವಸ್ತ್ರ, ಬೈಸಿಕಲ್, ಕ್ಷೀರ ಭಾಗ್ಯ, ಮಧ್ಯಾಹ್ನ ಉಪಹಾರ ಯೋಜನೆ, ಶೂ, ಸಾಕ್ಸ್ ಮತ್ತು ಬ್ಯಾಗ್ ಇತ್ಯಾದಿಗಳನ್ನು ವಿತರಿಸಲಾಗುತ್ತಿದೆ.

| | | |
|---|---|---|
| ಉ) | ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳು ಲಭ್ಯವಿರುವ ಬಗ್ಗೆ ಸಾರ್ವಜನಿಕವಾಗಿ ಮತ್ತು ಆನ್ ಲೈನ್ ತಂತ್ರಾಂಶದ ಮೂಲಕ ಪ್ರಚುರಪಡಿಸುವ ಬಗ್ಗೆ ಸರ್ಕಾರಕ್ಕೆ ಕ್ರಮ ವಹಿಸಿದೆಯೇ; ಕ್ರಮವಹಿಸಿದಲ್ಲಿ ವರದಿ ನೀಡುವುದು; ಇಲ್ಲದಿದ್ದಲ್ಲಿ, ಯಾವ ಕಾರಣಕ್ಕಾಗಿ ಕ್ರಮವಹಿಸಿರುವುದಿಲ್ಲ? (ವಿವರ ನೀಡುವುದು) | ಆನ್ ಲೈನ್ ತಂತ್ರಾಂಶದ ಮೂಲಕ ಪ್ರಚುರಪಡಿಸುವ ಬಗ್ಗೆ ಕ್ರಮವಹಿಸಲಾಗಿದೆ. ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು, sts.karnataka.gov.in/KMS ಮತ್ತು "school report card" ಈ ತಂತ್ರಾಂಶದಲ್ಲಿ ಪಡೆಯಬಹುದಾಗಿದೆ. |

**ಇಪಿ: 18 ಯೋಸಕ 2023**

(ಬಿ.ಸಿ.ನಾಗೇಶ್)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**
**ಹಾಗೂ ಸಕಾಲ ಸಚಿವರು**

ಅನುಬಂಧ-01

| District name | Schools Count | Own Bulding Available | Class rooooms Available | Toilets Available | Drinking water Available | Furniture Available | Play ground Available |
|---|---|---|---|---|---|---|---|
| BAGALKOT | 1433 | 1405 | 9109 | 1426 | 1431 | 514 | 979 |
| BALLARI | 667 | 660 | 4947 | 656 | 659 | 212 | 289 |
| BELAGAVI | 1493 | 1464 | 9083 | 1474 | 1490 | 401 | 784 |
| BELAGAVI CHIKKODI | 1924 | 1910 | 11082 | 1917 | 1921 | 492 | 1532 |
| BENGALURU RURAL | 1121 | 1110 | 4563 | 1116 | 1119 | 614 | 569 |
| BENGALURU U NORTH | 536 | 493 | 3649 | 534 | 527 | 319 | 275 |
| BENGALURU U SOUTH | 933 | 875 | 5574 | 929 | 927 | 489 | 419 |
| BIDAR | 1381 | 1372 | 8483 | 1364 | 1363 | 726 | 668 |
| CHAMARAJANAGARA | 824 | 811 | 4072 | 824 | 822 | 393 | 433 |
| CHIKKABALLAPURA | 1529 | 1510 | 5777 | 1524 | 1525 | 382 | 607 |
| CHIKKAMANGALURU | 1420 | 1418 | 6278 | 1417 | 1418 | 910 | 961 |
| CHITRADURGA | 1745 | 1731 | 7813 | 1722 | 1739 | 668 | 921 |
| DAKSHINA KANNADA | 1066 | 1052 | 6437 | 1066 | 1066 | 722 | 966 |
| DAVANAGERE | 1201 | 1185 | 6390 | 1196 | 1198 | 405 | 689 |
| DHARWAD | 847 | 823 | 6355 | 839 | 843 | 244 | 537 |
| GADAG | 698 | 693 | 5038 | 692 | 698 | 194 | 523 |
| HASSAN | 2430 | 2422 | 9341 | 2427 | 2429 | 1762 | 1377 |
| HAVERI | 1284 | 1274 | 7323 | 1268 | 1276 | 292 | 909 |
| KALBURGI | 2000 | 1977 | 12739 | 1868 | 1946 | 643 | 1081 |
| KODAGU | 419 | 415 | 2276 | 418 | 418 | 346 | 372 |
| KOLAR | 1900 | 1880 | 6936 | 1882 | 1895 | 606 | 564 |
| KOPPAL | 1083 | 1080 | 7524 | 1064 | 1070 | 201 | 649 |
| MANDYA | 1773 | 1763 | 8150 | 1772 | 1770 | 1033 | 1020 |
| MYSURU | 2075 | 2043 | 10490 | 2075 | 2073 | 1128 | 1685 |
| RAICHUR | 1606 | 1599 | 9697 | 1579 | 1578 | 303 | 687 |
| RAMANAGARA | 1306 | 1299 | 4684 | 1305 | 1306 | 648 | 520 |
| SHIVAMOGGA | 1982 | 1972 | 8765 | 1979 | 1981 | 1196 | 1383 |
| TUMAKURU | 2126 | 2107 | 8045 | 2122 | 2120 | 810 | 778 |
| TUMAKURU MADHUGIRI | 1337 | 1333 | 5146 | 1324 | 1331 | 361 | 655 |
| UDUPI | 681 | 671 | 3979 | 681 | 681 | 533 | 626 |
| UTTARA KANNADA | 975 | 967 | 3933 | 975 | 975 | 511 | 529 |
| UTTARA KANNADA SIRSI | 1176 | 1171 | 4591 | 1176 | 1173 | 642 | 1124 |
| VIJAYANAGARA | 1107 | 1101 | 7404 | 1081 | 1091 | 334 | 521 |
| VIJAYAPURA | 1953 | 1935 | 10874 | 1900 | 1906 | 411 | 1205 |
| YADAGIRI | 1037 | 1027 | 6027 | 973 | 1010 | 353 | 489 |
| Total | 47068 | 46548 | 242574 | 46565 | 46775 | 19798 | 27326 |

ಮೂಲ-ಸ್ಯಾಟ್ಸ್

(ಉಪನಿರ್ದೇಶಕರು(ಯೋಜನೆ))

## ಅನುಬಂಧ-02

**ತರಗತಿವಾರು ಸಮೀಕ್ಷೆಗೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ:-**

- 3 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – 33573
- 5 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – 35645
- 8 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – 40122
- 9 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – 52992
- 10 ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ – 49511

**ಮಾಧ್ಯಮ:-**

3 ಮತ್ತು 5 ನೇ ತರಗತಿಗೆ:- ಕನ್ನಡ ಮಾಧ್ಯಮ

8, 9 ಮತ್ತು 10 ನೇ ತರಗತಿಗೆ:- ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮ

**ವಿಷಯ:-**

**3 ನೇ ತರಗತಿಗೆ:-** ಭಾಷೆ (ಕನ್ನಡ) ಮತ್ತು ಗಣಿತ (Language and Numeracy)

**5 ನೇ ತರಗತಿಗೆ:-** ಕನ್ನಡ, ಇಂಗ್ಲೀಷ್, ಗಣಿತ ಮತ್ತು ಪರಿಸರ ಅಧ್ಯಯನ.

**8, 9 ಮತ್ತು 10 ನೇ ತರಗತಿಗೆ:-** ಪ್ರಥಮ ಭಾಷೆ (ಕನ್ನಡ, ಇಂಗ್ಲೀಷ್), ದ್ವಿತೀಯ ಭಾಷೆ (ಇಂಗ್ಲೀಷ್, ಕನ್ನಡ), ತೃತೀಯ ಭಾಷೆ (ಹಿಂದಿ), ಗಣಿತ, ವಿಜ್ಞಾನ, ಸಮಾಜ ವಿಜ್ಞಾನ.

ಪ್ರಸ್ತುತ ಉತ್ತರಿಸಿದ ಓ.ಎಂ.ಆರ್ ಹಾಗೂ ಉತ್ತರ ಹಾಳೆಗಳು ಜಿಲ್ಲಾ ಹಂತದಿಂದ ರಾಜ್ಯ ಹಂತಕ್ಕೆ ಬಂದಿದ್ದು, ಸ್ಕ್ಯಾನಿಂಗ್ ಮತ್ತು ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದೆ.

09/02/23

ಸಹ ನಿರ್ದೇಶಕರು(ಶಾಲಾ ಶಿಕ್ಷಣ)